"ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯಂ।
ಯದಿ ಶಬ್ದಾಹ್ವಯಂ ಜ್ಯೋತಿಃ ಆಸಂಸಾರಂ ನ ದೀಪ್ಯತೇ॥"

ಸಂಸ್ಕೃತದ ದಂಡಿ ಮಹಾಶಯನು ತನ್ನ 'ಕಾವ್ಯಾದರ್ಶ'ದ ಪ್ರಥಮ ಪರಿಚ್ಛೇದದ ನಾಲ್ಕನೆಯ ಕಾರಿಕೆಯಲ್ಲಿ ಹೀಗೆ ಹೇಳಿದ್ದಾನೆ. 'ಮಾತೆಂಬ ಜ್ಯೋತಿ ಬೆಳಗದೆ ಇದ್ದಿದ್ದರೆ ಮೂರು ಲೋಕವೆಲ್ಲವೂ ಕತ್ತಲೆಯಲ್ಲಿ ಮುಳುಗಿರುತ್ತಿತ್ತು.' ಮಾತು ಅಥವಾ ಭಾಷೆಯ ಮಹತ್ವ ಎಂಥದ್ದು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಮಾತೆಂದರೆ ಸಾರ್ಥಕ ಧ್ವನಿಗಳ ಮೊತ್ತ. ಹಲವು ಧ್ವನಿ ಸಂಕೇತಗಳು ಸೇರಿ ಒಂದು ಪದ. ಹಲವು ಪದಗಳು ಸೇರಿ ಒಂದು ವಾಕ್ಯ ಸಿದ್ಧಗೊಳ್ಳುತ್ತದೆ. ಎಲ್ಲಾ ಧ್ವನಿ/ಶಬ್ದಗಳಿಗೂ ಅರ್ಥವಿರುವುದಿಲ್ಲ. ಒಂದು ಶಬ್ದಕ್ಕೆ ಒಂದು ಅರ್ಥವೆಂಬುದು ಹುಟ್ಟಿನಿಂದಲೇ ನಿಗದಿಯಾಗಿರುವುದಿಲ್ಲ. ಸಮಾಜ, ಸಂಸ್ಕೃತಿಯ ಪರಿಸರದಲ್ಲಿ ರೂಪಗೊಳ್ಳುತ್ತದೆ. ಹೀಗೆ ರೂಪಿತವಾದ 'ಪದ' ಸಮಾಜ ಒಪ್ಪಿತವಾದರೆ ಚಲಾವಣೆಗೆ ಬರುತ್ತದೆ, ಇಲ್ಲದಿದ್ದಲ್ಲಿ ಅಲ್ಲಿಯೇ ನಶಿಸಿ ಹೋಗುತ್ತದೆ. ಶಬ್ದ ಮತ್ತು ಅರ್ಥಗಳ ಸಂಬಂಧವನ್ನು ಕಾಳಿದಾಸ ಕವಿಯು "ವಾಗರ್ಥಾ ವಿವ ಸಂಪೃಕ್ತೌ ವಾಗರ್ಥಾ ಪ್ರತಿಪತ್ತಯೇ। ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ॥" ಅಂದರೆ 'ವಾಕ್ ಮತ್ತು ಅರ್ಥ ಎರಡೂ ಪಾರ್ವತಿ–ಪರಮೇಶ್ವರರಂತೆ ಅವಿನಾಭಾವ ಸಂಬಂಧವುಳ್ಳವು' ಎಂದು ಅರ್ಧನಾರೀಶ್ವರ ಪರಿಕಲ್ಪನೆಯನ್ನು ನೀಡಿದ್ದಾನೆ.

ಸುಲಭ ವ್ಯಾಕರಣ: 'ವ್ಯಾಕರಣಾ ಹಮ್ ಕ್ಯಾಕರ್ನಾ' ಎಂಬ ತಮಾಷೆಯ ಮಾತೊಂದಿದೆ. ಬೋಧನೆಯ ಸಂದರ್ಭಗಳಲ್ಲಿ ವ್ಯಾಕರಣದ ಕಡೆ ಒತ್ತು ನೀಡಿದಾಗ ಈ ಬಗೆಯ ಪ್ರತಿಕ್ರಿಯೆ ವಿದ್ಯಾರ್ಥಿಗಳ ಕಡೆಯಿಂದ ಬರುವುದು ಸಹಜ. ವ್ಯಾಕರಣವೆಂದರೆ 'ಕಬ್ಬಿಣದ ಕಡಲೆ' ಎಂದೇ ಭಾವಿಸಿರುವ ಹಲವರಿಗೆ ಇದೊಂದು ವಮನಕಾರಿ(ವಾಕರಿಕೆ) ಸಂದರ್ಭವೆನಿಸಿಬಿಡುತ್ತದೆ. ಯಾಕೆಂದರೆ ವ್ಯಾಕರಣವನ್ನು ಅಥವಾ ಯಾವುದೇ ಶಾಸ್ತ್ರವಿಷಯವನ್ನು ರಸವತ್ತಾಗಿ ಬೋಧಿಸುವ ಕುಶಲಮತಿ ಎಲ್ಲರಿಗೂ ಕರಗತವಾಗಿರುವುದಿಲ್ಲ. ಬೋಧಕ ಅಥವಾ ಶಿಕ್ಷಕರಲ್ಲಿಯೇ ಈ ಕುರಿತ ಉದಾಸೀನ ಪ್ರವೃತ್ತಿಯೂ ಒಂದು ಕಾರಣವೆನ್ನಬಹುದು. ಇದಕ್ಕೆ ಅಪವಾದಗಳಿಲ್ಲದಿಲ್ಲ. ಅತ್ಯಂತ ಪ್ರೀತಿಯಿಂದ, ವಿದ್ಯಾರ್ಥಿಗಳ ಮನಸ್ಸಿಗೆ ನಾಟುವಂತೆ ಕಲಿಸುವವರೂ ಇದ್ದಾರೆ. ಬೋಧನೆಯೊಂದು ಕಲೆ. ವ್ಯಾಕರಣವೆಂಬುದೇನು ಉಕ್ಕಿನ ಕಡಲೆಯಲ್ಲ. ಸಹಜವಾಗಿ ಪಡೆಯುವಂಥದ್ದು. ಇದಕ್ಕೆ ಒಂದೆರಡು ಮಾತುಗಳಲ್ಲಿ ತನ್ನ ಭಾವನೆಯನ್ನು ಅಭಿವ್ಯಕ್ತಿಸುವ ಪುಟ್ಟ ಮಕ್ಕಳನ್ನೇ ಗಮನಿಸಬಹುದು. 'ಅಮ್ಮಾ, ನನಗೆ ಹಾಲು ಬೇಕು,' ವಾಕ್ಯವನ್ನು ನೋಡಿ. ಎಷ್ಟು ವ್ಯಾಕರಣಬದ್ಧವಾಗಿ ಮಗು ಮಾತನಾಡುತ್ತದೆ! ಎಂದು. 'ಅಮ್ಮಾ' ಸಂಬೋಧನಾ ರೂಪ. 'ನನಗೆ' ಆತ್ಮಾರ್ಥಕ, ಉತ್ತಮ ಪುರುಷ, ಏಕವಚನ ರೂಪ. 'ಹಾಲು' ಕರ್ಮಪದ. 'ಬೇಕು' ಕ್ರಿಯಾಪದ. ಮಗುವಿಗೆ ಇದನ್ನು ಯಾರಾದರೂ ಹೇಳಿಕೊಟ್ಟಿದ್ದಾರೆಯೇ? ಆದ್ದರಿಂದ ಯಾರೂ ವ್ಯಾಕರಣಕ್ಕೆ ಭಯಪಡಬೇಕಾದ ಅವಶ್ಯಕತೆ ಇಲ್ಲ. ಅದನ್ನು ನಮ್ಮ ಗೆಳೆಯನನ್ನಾಗಿ ಮಾಡಿಕೊಳ್ಳಬೇಕು. ಮಾತನಾಡುವ ಅಥವಾ ಬರೆಯುವ ಸಂದರ್ಭದಲ್ಲಿ ವ್ಯವಸ್ಥೆಯೊಂದನ್ನು ರೂಢಿಸಿಕೊಂಡರೆ ಸಾಕು. ಆಗ ಉದ್ದೇಶಿತ ಅರ್ಥ ಮತ್ತು ಭಾವ ಸಮರ್ಪಕವಾಗಿ ಸಂವಹನಗೊಳ್ಳುತ್ತದೆ. ಇಲ್ಲದಿದ್ದಲ್ಲಿ ಅನ್ಯಾರ್ಥಗಳು ನುಸುಳಿ ಗೊಂದಲಕ್ಕೆಡೆಮಾಡಿಕೊಡುತ್ತವೆ. ಆದ್ದರಿಂದ ಖಚಿತತೆಗಾಗಿ ವ್ಯಾಕರಣದ ಸರಿಯಾದ ಬಳಕೆಯು ಅಗತ್ಯ. ವ್ಯಾಕರಣದಲ್ಲಿ ವಿವರಣಾತ್ಮಕ ವ್ಯಾಕರಣ(ಡಿಸ್ಕ್ರಿಪ್ಟೀವ್ ಗ್ರಾಮರ್) ಮತ್ತು ನಿರ್ದೇಶಾತ್ಮಕ ವ್ಯಾಕರಣ(ಪ್ರಿಸ್ಕ್ರಿಪ್ಟೀವ್ ಗ್ರಾಮರ್) ಎಂಬ ಎರಡು ಬಗೆಗಳಿವೆ. ಉದಾಹರಣೆಗಳನ್ನು ಇಟ್ಟುಕೊಂಡು ವಿಭಾಗಿಸಿ ಸೂತ್ರವನ್ನು ರೂಪಿಸುವುದು ಮೊದಲ ಬಗೆಯಾದರೆ; ಸೂತ್ರವನ್ನು ರೂಪಿಸಿ ನಂತರ ಉದಾಹರಣೆಗಳನ್ನು ಜೋಡಿಸುವುದು ಇನ್ನೊಂದು ಬಗೆ. ಸಾಂಪ್ರದಾಯಿಕ ವ್ಯಾಕರಣಗಳು ಬಹುತೇಕ ನಿರ್ದೇಶಾತ್ಮಕ ವ್ಯಾಕರಣಗಳಾದರೆ; ತೀ.ನಂ.ಶ್ರೀ. ಅವರ 'ಕನ್ನಡ ಮಧ್ಯಮ ವ್ಯಾಕರಣ' ವಿವರಣಾತ್ಮಕ

ವ್ಯಾಕರಣಕ್ಕೆ ನಿದರ್ಶನ. ಬೋಧಕರು ಈ ಎರಡೂ ವಿಧಾನಗಳನ್ನು ಕರಗತ ಮಾಡಿಕೊಳ್ಳುವುದು ಅವಶ್ಯ. ಸಾಮಗ್ರಿ ವಿಪುಲವಾಗಿದ್ದಷ್ಟೂ ಬೋಧನೆ ಸರಳವಾಗುತ್ತದೆ. ಈ ನಿಟ್ಟಿನಲ್ಲಿ ಅದರಲ್ಲೂ ಪ್ರೌಢಶಾಲಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 1971ರಲ್ಲಿ ಆಗಿನ ಮೈಸೂರು ಸರ್ಕಾರ ಸಿದ್ಧಪಡಿಸಿದ ಎರಡು ರೂ. ಬೆಲೆಯ 'ಕನ್ನಡ ವ್ಯಾಕರಣ ದರ್ಪಣ' ಅತ್ಯಂತ ಸಮರ್ಪಕ ವ್ಯಾಕರಣ ಪುಸ್ತಕವೆನ್ನಬಹುದು. ಅಲ್ಲಿಂದೀಚೆಗೆ ಹಲವಾರು ವ್ಯಾಕರಣ ಪುಸ್ತಕಗಳು ವೈಯಕ್ತಿಕ ಹಾಗೂ ಸಾಂಸ್ಥಿಕ ಪ್ರಯತ್ನಗಳಿಂದ ಬಂದಿವೆ. ಅವನ್ನು ತುಲನಾತ್ಮಕವಾಗಿ ಗಮನಿಸಬಹುದು. ತಲಸ್ಪರ್ಶಿ ಅಧ್ಯಯನ ಮಾತ್ರ ಉಕ್ಕಿನ ಕಡಲೆಯಂತಿರುವ ವ್ಯಾಕರಣವನ್ನು ಕಬ್ಬಿನ ರಸವನ್ನಾಗಿಸಲು ಉತ್ತಮ ಮಾರ್ಗ. ಅಧ್ಯಯನಶೀಲತೆಯೇ ಪರಿಣಾಮಕಾರಿ ಬೋಧನೆಯ ಕೀಲಿಕೈ. ಈ ನಿಟ್ಟಿನಲ್ಲಿ ಮುಂದಿನ ಸಂಚಿಕೆಗಳಲ್ಲಿ ಕನ್ನಡ ಭಾಷೆ, ಛಂದಸ್ಸು, ವ್ಯಾಕರಣ ಮತ್ತು ಅಲಂಕಾರದ ಅಂಶಗಳನ್ನು ಹತ್ತನೆಯ ತರಗತಿಯ ಪಠ್ಯದ ಚೌಕಟ್ಟಿನಲ್ಲಿ ವಿವರಿಸುವ ಪ್ರಯತ್ನ ಮಾಡಲಾಗುವುದು. ಬೋಧಕರು ಜೊತೆ ಜೊತೆಗೆ ಇಂಗ್ಲಿಷ್ ಗ್ರಾಮರ್, ಸಂಸ್ಕೃತ ವ್ಯಾಕರಣಗಳ ಸ್ವರೂಪ ಲಕ್ಷಣಗಳನ್ನೂ ಸಾಂದರ್ಭಿಕವಾಗಿ ಪರಿಚಯ ಮಾಡಿದರೆ ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾದೀತು.

---000---

ಡಾ.ಬಿ.ಜಿ.ಕನಕೇಶಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು